ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2019–20

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು–01
ದಿನಾಂಕ: 11–09–2019

**ಸುತ್ತೋಲೆ**

ವಿಷಯ: ರಾಷ್ಟ್ರೀಯ ಜಂತು ಹುಳು ನಿರ್ಮೂಲನಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಕುರಿತು.
ಉಲ್ಲೇಖ: ಕರ್ನಾಟಕ ಆರೋಗ್ಯ ಇಲಾಖೆಯ NHM/RKSK/NDD/03(B)/2019-20
Date: 19-07-2019

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯವು ರಾಷ್ಟ್ರೀಯ ಜಂತು ಹುಳು ನಿರ್ಮೂಲನಾ ಕಾರ್ಯಕ್ರಮವನ್ನು ದಿನಾಂಕ: 25–09–2019 ರಂದು ಜಾರಿಗೊಳಿಸಲು ಉದ್ದೇಶಿಸಿದೆ. ಸದರಿ ದಿನಾಂಕದಂದು ಗೈರುಹಾಜರಾದ ಮಕ್ಕಳಿಗೆ ಪುನ: 30–09–2019 ರಂದು ಇದೇ ಕಾರ್ಯಕ್ರಮವನ್ನು ಆಯೋಜಿಸಲು ಉದ್ದೇಶಿಸಲಾಗಿದ್ದು 19 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಔಷಧಿಯನ್ನು ನೀಡುವ ಮತ್ತು ವಿದ್ಯಾರ್ಥಿಗಳ ಮೂಲಕ ಜನಸಮಾನ್ಯರಲ್ಲಿ ಈ ಸಂಬಂಧ ಜಾಗೃತಿ ಮೂಡಿಸುವ ಗುರಿ ಹೊಂದಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯರು ಮತ್ತು ಸಿಬ್ಬಂದಿ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಸದರಿ ದಿನಗಳಂದು ಭೇಟಿ ನೀಡಿ ಮಕ್ಕಳಿಗೆ ಜಂತು ಹುಳು ನಿರ್ಮೂಲನೆ ಕುರಿತಾದ ಜಾಗೃತಿ ಮೂಡಿಸಿ. ಜವಾಬ್ದಾರಿಯುತ ವೈದ್ಯರೇ ಮಕ್ಕಳಿಗೆ ಔಷಧಿಯನ್ನು ನೀಡುತ್ತಾರೆ. ಸದರಿ ಕಾರ್ಯಕ್ರಮವು ವಿದ್ಯಾರ್ಥಿಗಳ ಆರೋಗ್ಯದ ಕುರಿತಾದ ಜಾಗೃತಿ ಹಾಗೂ ಆರೋಗ್ಯ ವೃದ್ಧಿಸುವಲ್ಲಿ ಸಹಕಾರಿಯಾಗಲಿದೆ ಎಂದು ಆಶಿಸಲಾಗಿದೆ. ಹೆಚ್ಚಿನ ವಿವರಳನ್ನು ಆರೋಗ್ಯ ಇಲಾಖೆಯ ಈ ಕೆಳಗಿನ ಅಂತರ್ಜಾಲ ಕೊಂಡಿಯ ಮೂಲಕ ವಿಕ್ಷೀಸಬಹುದಾಗಿದೆ.

https://drive.google.com/open?id=1hyc5SHm_94F9VNFO1BqXdv9k21BumQKK

ಇಗಾಗಲೇ ರಾಷ್ಟ್ರಿಯ ಆರೋಗ್ಯ ಅಭಿಯಾನದ ರಾಜ್ಯ ಸಂಯೋಜಕರಾದ ಡಾ. ಸಿದ್ಧರಾಮ್ ರವರು ಇಲಾಖೆಯ ಸ್ಟುಡಿಯೋ ಮೂಲಕ ಸದರಿ ದಿನದ ಕುರಿತಾಗಿ ನೀಡಿರುವ ಸಮಗ್ರ ಮಾಹಿತಿಯನ್ನು https://www.youtube.com/watch?v=I9ezmQS7qA8 ರ ಮೂಲಕ ವೀಕ್ಷಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ. ವೀಣಾ ವಿ. ರಾಜ್ಯ ನೋಡಲ್ ಅಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (080–2234093, rksk.karnataka@gmail.com) ಇವರನ್ನು ಅಥವಾ ಸಂಬಂಧಿಸಿದ ತಾಲೂಕಾವಾರು ಆರೋಗ್ಯ ಅಧಿಕಾರಿಗಳನ್ನು ಸಂಪರ್ಕಿಸುವುದು.. ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳ ಬಹುದಾಗಿದೆ.

ನಿರ್ದೇಶಕರು

ಪ್ರತಿ:
1. ಪ್ರಾಚಾರ್ಯರು ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳು
2. ನೋಡಲ್ ಅಧಿಕಾರಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.
3. ಎವಿಡನ್ಸ ಯಾಕ್ಷನ್ ಸಂಸ್ಥೆಯ ಅಧಿಕಾರಿಗಳು.
4. ಇ-ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು
5. ಕಛೇರಿ ಪ್ರತಿ